# ದೇವರ ದರ್ಶನ



ಒಮ್ಮೆ ಭಕ್ತನೊಬ್ಬ ತುಳಸೀದಾಸರನ್ನು 'ನೀವು ಇಷ್ಟೆಲ್ಲ ರಾಮನಾಮ ಗುಣಗಾನ ಮಾಡಿದ್ದೀರಲ್ಲ, ನಿಮಗೆ ಒಮ್ಮೆಯಾದರೂ ಶ್ರೀರಾಮನ ದರ್ಶನ ಆಗಿದೆಯೇ?' ಎಂದು ಕೇಳಿದ. ಅದಕ್ಕೆ ತುಳಸೀದಾಸರು 'ಖಂಡಿತವಾಗಿಯೂ ಆಗಿದೆ' ಎಂದು ಹೆಮ್ಮೆಯಿಂದ ಹೇಳಿದರು. ಭಕ್ತನು 'ಹಾಗಿದ್ದರೆ ನನಗೂ ಶ್ರೀರಾಮದರ್ಶನ ಸಾಧ್ಯವಿದೆಯೇ?' ಎಂದು ಕೇಳಿದ. ತುಳಸೀದಾಸರು 'ಯಾಕಿಲ್ಲ? ನಿನಗೂ ಶ್ರೀರಾಮದರ್ಶನ ಸಾಧ್ಯವಿದೆ! ಅದು ಬಹಳ ಸುಲಭವಾಗಿಯೂ ಇದೆ. ನೀನು ಈ ಪ್ರಪಂಚದಲ್ಲಿ ಯಾವುದೇ ವ್ಯಕ್ತಿಯನ್ನಾದರೂ ನೋಡು. ಅಲ್ಲಿ ನಿನಗೆ ರಾಮನೇ ಕಾಣುತ್ತಾನೆ' ಎಂದರು. ಭಕ್ತನಿಗೆ ಅರ್ಥವಾಗಲಿಲ್ಲ. 'ಬಿಡಿಸಿ ಹೇಳಿ ಸ್ವಾಮಿ' ಎಂದು ವಿನಂತಿಸಿದನು.

ತುಳಸೀದಾಸರು ಹೇಳಿದರು, 'ನೋಡು ಇದಕ್ಕೊಂದು ಸುಲಭ ಸೂತ್ರ ಇದೆ. ಈ ಪ್ರಪಂಚದಲ್ಲಿ ಯಾರದೇ ಹೆಸರಿಗಾದರೂ ಸರಿ ಈ ಸೂತ್ರವನ್ನು ಅಳವಡಿಸಿದರೆ ಕೊನೆಯಲ್ಲಿ ನಿನಗೆ ರಾಮನ ಹೆಸರೇ ಸಿಗುತ್ತದೆ.'

ಭಕ್ತನಿಗೆ ಮತ್ತಷ್ಟು ಕುತೂಹಲ ಉಂಟಾಗಿ ಆ ಸೂತ್ರದ ಬಗ್ಗೆ ಕೇಳಿದ.

ಆಗ ತುಳಸೀದಾಸರು ಹೇಳಿದರು–

ನಾಮ ಚತುರ್ಗುಣ ಪಂಚತತ್ವ ಮಿಲನ
ತಾಸಾಂ ದ್ವಿಗುಣ ಪ್ರಮಾಣ
ತುಲಸೀ ಅಷ್ಟಸೌಭಾಗ್ಯೇ ಅಂತ ಮೇ
ಶೇಷ ರಾಮ ಹೀ ರಾಮ.

ಇದರ ಪ್ರಕಾರ ಯಾರದೇ ಹೆಸರಾದರೂ ಸರಿ, ಅದರಲ್ಲಿರುವ ಅಕ್ಷರಗಳನ್ನು ಎಣಿಸು. ಅದನ್ನು ನಾಲ್ಕರಿಂದ ಗುಣಿಸು (ಚತುರ್ಗುಣ). ಅದಕ್ಕೆ ಐದನ್ನು ಕೂಡಿಸು (ಪಂಚತತ್ವ ಮಿಲನ). ಆಗ ಬಂದ ಸಂಖ್ಯೆಯನ್ನು ದುಪ್ಪಟ್ಟು ಮಾಡು (ದ್ವಿಗುಣ ಪ್ರಮಾಣ). ಬಂದ ಉತ್ತರವನ್ನು ಎಂಟರಿಂದ ಭಾಗಿಸು (ಅಷ್ಟ ಸೌಭಾಗ್ಯ) ಭಾಗಲಬ್ಧ ಎಷ್ಟೇ ಇರಲಿ ಶೇಷ ಉಳಿಯುವುದು ಎರಡೇ. ಆ ಎರಡು ಅಕ್ಷರಗಳೇ ರಾಮ.

ಮೊದಲು ನನ್ನ ಹೆಸರು ನಿರಂಜನ. ಇರುವುದು ನಾಲ್ಕು ಅಕ್ಷರಗಳು. ಇದಕ್ಕೆ ಸೂತ್ರ ಅನ್ವಯಿಸೋಣ 4X4=16; 16+5=21; 21X2=42 42ನ್ನು 8ರಿಂದ ಭಾಗಿಸಿದರೆ ಭಾಗಲಬ್ಧ 5 ಮತ್ತು ಶೇಷ 2.

ಭಕ್ತನಿಗೆ ಆಶ್ಚರ್ಯವೋ ಆಶ್ಚರ್ಯ. ಹೌದಲ್ವಾ! ಹೆಸರು ಯಾವುದೇ ಇದ್ದರೂ, ಅವೆಷ್ಟು ಅಕ್ಷರಗಳೇ ಇದ್ದರೂ ಕೊನೆಯಲ್ಲುಳಿಯುವುದು ಎರಡಕ್ಷರ 'ರಾಮ' ಮಾತ್ರ. ಭಕ್ತನಿಗೆ ಬಹಳ ಖುಷಿಯಾಯಿತು. ತುಳಸೀದಾಸರ ಕಾಲಿಗೆರಗಿದ. 'ಇವತ್ತು ನನಗೆ ಶ್ರೀರಾಮದರ್ಶನ ಮಾಡಿಸಿದಿರಿ. ಇನ್ನು ಯಾವಾಗಲೂ ನಾನು ರಾಮನನ್ನೇ ಕಾಣುತ್ತಿರುತ್ತೇನೆ' ಎಂದು ಅಲ್ಲಿಂದ ಹೊರಟು ಹೋದನು.

ಅಷ್ಟಾಗಿ ತುಳಸೀದಾಸರು ಹೇಳಿದ ಸೂತ್ರದಲ್ಲಿನ ಸಂಖ್ಯೆಗಳ ಮತ್ತು ಗಣಿತ ಕ್ರಿಯೆಗಳ ಮಹತ್ವ ಏನು ಗೊತ್ತೆ?

ಚತುರ್ಗುಣ= ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳು.

ಪಂಚತತ್ವ= ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶ ಎಂಬ ಪಂಚಮಹಾಭೂತಗಳು.

ದ್ವಿಗುಣ= ಮಾಯೆ ಮತ್ತು ಬ್ರಹ್ಮ

ಅಷ್ಟಸೌಭಾಗ್ಯ= ಅನ್ನ, ಅರ್ಥ, ಪ್ರಭುತ್ವ, ಯೌವನ, ವೈಭವ ಗೃಹ, ವಸ್ತ್ರ, ಆಭರಣ ಎಂಬ ಎಂಟು ಸೌಭಾಗ್ಯಗಳು. ಇವುಗಳ ಜೊತೆ ನಾವು ಜೀವನ ಜಂಜಾಟ ನಡೆಸಿ, ಗುಣಿಸಿ, ಕೂಡಿಸಿ, ಭಾಗಿಸಿ, ಭೋಗಿಸಿ ಕೊನೆಗೂ ಉಳಿಯುವ ಶೇಷ 'ರಾಮ' ಮಾತ್ರ.

'ತಂದಿರುವುದೂ ಏನೂ ಇಲ್ಲ. ಕೊಂಡೊಯ್ಯುವುದೂ ಏನೂ ಇಲ್ಲ. ಇದ್ದುದರಲ್ಲಿ ಹಂಚಿಕೊಂಡು ತಿನ್ನೋಣ' ಎಂಬುದೇ ಇದರ ತಾತ್ಪರ್ಯ.

(ಸಂಗ್ರಹ): **ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**

# ಅಮ್ಮ ಮತ್ತು ಅಪ್ಪ

ಅಮ್ಮನ ಮಡಿಲು
ಅಪ್ಪನ ಹೆಗಲು
ಸ್ವರ್ಗಕ್ಕೂ ಮಿಗಿಲು
ಅಮ್ಮನ ತುತ್ತು
ಅಪ್ಪನ ಮುತ್ತು
ಅಮೃತಕ್ಕೂ ಮಿಗಿಲು

ಅಮ್ಮನ ಕನಸು
ಅಪ್ಪನ ಮನಸು
ಗಗನಕ್ಕೂ ಮಿಗಿಲು
ಅಮ್ಮನ ಆಸೆ
ಅಪ್ಪನ ಭಾಷೆ
ಜೀವಕ್ಕೂ ಮಿಗಿಲು

ಅಮ್ಮನ ನುಡಿಯು
ಅಪ್ಪನ ನಡೆಯು
ಸತ್ಯಕ್ಕೂ ಮಿಗಿಲು
ಅಮ್ಮನ ಪೂಜೆ
ಅಪ್ಪನ ಸೇವೆ
ದೈವಕ್ಕೂ ಮಿಗಿಲು

ಅಮ್ಮನ ತಾಳ್ಮೆ
ಅಪ್ಪನ ದುಡಿಮೆ
ದೀಪಕ್ಕೂ ಮಿಗಿಲು
ಅಮ್ಮನ ಪ್ರೀತಿ
ಅಪ್ಪನ ನೀತಿ
ಸರ್ವಕ್ಕೂ ಮಿಗಿಲು.

**ಸೋಮಲಿಂಗ ಬೇಡರ, ಆಲೂರ**

